**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಒ.ಎಸ್.ನಂ.** | **74/2005** |
| **ಪಿ.ಡಬ್ಲ್ಯೂ** | **1** |
| **ದಿನಾಂಕ :-** | **06.01.2026** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಹೆಚ್.ಎಸ್. ವಕೀಲರಿಂದ**

ನಮ್ಮ ತಂದೆಯವರು ಮಾಡಿಕೊಂಡ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಅದರಲ್ಲಿ ಬರೆದಿರವ ಮಾಹಿತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-1 ರ 6ನೇ ಪುಟದಲ್ಲಿ ನನ್ನ ತಂದೆಯ ಭಾವಚಿತ್ರ ಮತ್ತು ಸಹಿ ಇದೆ ಎಂದರೆ ಸರಿ. ನಾನು ಡಿಪ್ಲೋಮಾ ವ್ಯಾಸಂಗ ಮಾಡಿರುತ್ತೇನೆ. ನನ್ನ ತಂದೆಯವರಿಗೆ ಸರ್ವೆ ನಂಬರ್-79/3 ರಲ್ಲಿ 16 ½ ಗುಂಟೆ ಬಂದಿದೆ ಎಂದರೆ ಸರಿ. ನಿಪಿ-1 ಆಗುವ ಮೊದಲು ನಾನು ಬೆಂಗಳೂರಿನಲ್ಲಿ ವಾಸವಿದ್ದೆ ಎಂದರೆ ಸರಿ. ಇತರೆ ನನ್ನ ಅಣ್ಣತಮ್ಮಂದಿರು ಬೆಂಗಳೂರಿನಲ್ಲಿ ಹಾಗೂ ಊರಿನಲ್ಲೂ ಸಹ ವಾಸವಿರುತ್ತಿದ್ದೇವು. ನಾವು ಎಲ್ಲರೂ ಬೆಂಗಳೂರಿನ ವಿಳಾಸ ಹಾಕಿದ್ದೇವೆ ಎಂದರೆ ಸರಿ. ಈ ಪ್ರಕರಣ ಮಾಡುವ ಕಾಲಕ್ಕೆ ನನ್ನ ತಂದೆ ಸಹ ಬೆಂಗಳೂರಿನಲ್ಲಿ ವಾಸವೆಂದು ನಮೂದು ಮಾಡಿದ್ದರು ಎಂದರೆ ಸರಿ. ಈ ಪ್ರಕರಣ ದಾಖಲಿಸಿದ 10 ವರ್ಷಗಳ ಹಿಂದಿನಿಂದಲೂ ನಾವು ಬೆಂಗಳೂರಿನಲ್ಲಿ ವಾಸವಿದ್ದೇವು. ನಿಪಿ-1ರ ವಿಭಾಗ ಪತ್ರ ಆಗುವ ಮೊದಲು ಮನೆ ಮಾತ್ರ ಬೇರೆಯಾಗಿ ವಾಸವಿದ್ದೇವು. ಜಮೀನುಗಳೆಲ್ಲಾ ಒಟ್ಟಿಗೆ ಮಾಡುತ್ತಿದ್ದೇವು. ಆ ಬಗ್ಗೆ ನಿಪಿ-1 ರಲ್ಲಿ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಸದರಿ ವಿಭಾಗ ಪತ್ರ ಆಗುವ ಮೊದಲೇ ನಾವು ಪಿತ್ರಾರ್ಜಿತ ಆಸ್ತಿಗಳ ಭಾಗ ಮಾಡಿಕೊಂಡಿದ್ದೇವು ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-1 ಆದ ನಂತರ ನನ್ನ ತಂದೆಯವರಿಗೆ ಬಂದ ಆಸ್ತಿಗಳ ಬಗ್ಗೆ ಕಂದಾಯ ದಾಖಲೆಗಳಲ್ಲಿ ಅವರ ಹೆಸರು ಬಂತು ಎಂದರೆ ಸರಿ. ಜಿ.ಮುನಿಸ್ವಾಮಪ್ಪ ಎಂಬುವವರು ನನ್ನ ತಾತ. ಅವರು ಪತ್ರ ಬರಹಗಾರರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಪತ್ರ ಬರಹಗಾರರಾಗಿರುವ ಬಗ್ಗೆ ಪರವಾನಗಿ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಯಾವ ಯಾವ ಪತ್ರಗಳಿಗೆ ಕನ್ನಡ ಹಾಗೂ ಇಂಗ್ಲೀಷ್ ನಲ್ಲಿ ಸಹಿ ಮಾಡಿದ್ದಾರೆಂದು ಹೇಳಲು ಆಗುವುದಿಲ್ಲ. ನನ್ನ ತಂದೆ ಇಂಗೀಷ್ ನಲ್ಲಿ ಸಹಿ ಮಾಡಿರುವ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದಕ್ಕೆ ಆಗುತ್ತದೆಯೇ ಎಂದರೆ ನೋಡಬೇಕು ಎಂದು ಉತ್ತರಿಸಿರುತ್ತಾರೆ.

ಸರ್ವೆ ನಂಬರ್-79/3 ರಲ್ಲಿ 3 ಗುಂಟೆ ಆಸ್ತಿಗೆ ದಾವೆ ಮಾಡಿರುತ್ತೇವೆ. ಅದರ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಜಿ.ಮುನಿಸ್ವಾಮಪ್ಪನವರ ಜಮೀನು, ಉತ್ತರಕ್ಕೆ ರಾಧಮ್ಮನವರ ಜಮೀನು, ದಕ್ಷಿಣಕ್ಕೆ ನಾಗಶಿವ ರೆಡ್ಡಿಯವರ ಜಮೀನು. ನನ್ನ ತಂದೆ ಭಾಗಕ್ಕೆ ಬಂದಂತಹ 16 ½ ಗುಂಟೆಗೂ ಅದೆ ಚೆಕ್ಕುಬಂದಿ.

ಅಕ್ಕಮ್ಮ ನವರ ಮಗ ನಾರಾಯಣಸ್ವಾಮಿ ರವರು ಗೊತ್ತು. ಅವರು ಬಂಡೆನಲ್ಲಸಂದ್ರ ಗ್ರಾಮದವರು ಎಂದರೆ ಸರಿ. ನನ್ನ ತಂದೆ ಮೂಲತಃ ಸದರಿ ಗ್ರಾಮದ ವಾಸಿ ಎಂದರೆ ಸರಿ. ನನ್ನ ತಂದೆ ಸಿ.ಯಲ್ಲಪ್ಪ ಎಂದು ಕನ್ನಡದಲ್ಲಿ ಸಹಿ ಮಾಡುತ್ತಾರೆ ಎಂದರೆ ಸರಿ. ಬಂಡೆನಲ್ಲಸಂದ್ರ ಗ್ರಾಮದ ಜಿ.ಮುನಿಸ್ವಾಮಪ್ಪ ನನ್ನ ತಾತನ ತಮ್ಮ. ಅವರು ಸಹ ಕನ್ನಡದಲ್ಲಿಯೇ ಜಿ.ಮುನಿಸ್ವಾಮಪ್ಪ ಎಂದು ಸಹಿ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕಃ 20.06.1988 ರಲ್ಲಿ ನನ್ನ ತಂದೆ ಸರ್ವೆ ನಂಬರ್-79/3 ರಲ್ಲಿ 3 ಗುಂಟೆ ಆಸ್ತಿಯನ್ನು 1ನೇ ಪ್ರತಿವಾದಿಗೆ ಮಾರಾಟ ಮಾಡಲು ಒಪ್ಪಿ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸದರಿ ಪತ್ರವನ್ನು ತೋರಿಸಲಾಗಿ ಅದನ್ನು ಒಪ್ಪಿದ್ದರಿಂದ ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಪತ್ರವನ್ನು ನನ್ನ ತಂದೆ ಮಾಡಿಕೊಟ್ಟಿಲ್ಲ, ಸದರಿ ದಾಖಲೆಯನ್ನು ಅವರೇ ಸೃಷ್ಟಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ನನಗೆ ಪಿತ್ರಾರ್ಜಿತವಾಗಿ ಬಂದು ಹಾಲಿ ನನ್ನ ಸ್ವಾಧೀನಾನುಭವದಲ್ಲಿರುವ ಎಂದು ಬರೆಯಲಾಗಿದೆ ಎಂದುರೆ ನನಗೆ ಗೊತ್ತಿಲ್ಲ. ಸದರಿ ನಿಡಿ-1 ರಲ್ಲಿ 3 ಗುಂಟೆ 3,300/- ಎಂದು ದರ ನಿಗದಿಪಡಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ನನ್ನ ತಂದೆ ರೂ.2,000/- ಮುಂಗಡವಾಗಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಉಳಿದ ರೂ.1,300/- ಅನ್ನು ಮುಂಬರುವ ಗೌರಿ ಗಣೇಶ ಹಬ್ಬಕ್ಕೆ ಕೊಡುವುದಾಗಿ ಬರೆಯಲಾಗಿದೆ ಎಂದರೆ ಸರಿಯಲ್ಲ.

ಈ ದಾವೆಯನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಸರಿ ಇದೆಯೇ ಎಂದರೆ ಹೌದು. ದಾವಾ ಷೆಡ್ಯೂಲ್ ಚೆಕ್ಕುಬಂದಿ ಪೂರ್ವಕ್ಕೆ ಮುನಿಯಪ್ಪನ ಆಸ್ತಿ ಎಂದು ನಮೂದು ಆಗಿದೆ ಎಂದರೆ ಸರಿ. ಅದೇ ರೀತಿ ನಿಡಿ-1ರ ಆಸ್ತಿಯ ಪೂರ್ವಕ್ಕೆ ಮುನಿಯಪ್ಪನ ಆಸ್ತಿ ಎಂದು ನಮೂದು ಇದೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿರುವ ಷೆಡ್ಯೂಲ್ ಹಾಗೂ ವಾದಪತ್ರದಲ್ಲಿರುವ ಷೆಡ್ಯೂಲ್ ಎರಡು ಒಂದೇ ಎಂದರೆ ಸಾಕ್ಷಿ ಷೆಡ್ಯೂಲ್ ಸರಿಯಿಲ್ಲ ಎಂದು ನುಡಿದಿರುತ್ತಾರೆ.

**(ಮುಂದುವರೆದ ವಾಟೀ ಸವಾಲಿಗೆ ಕಾಲಾವಕಾಶ, ಕೇಳಲಾಗಿ ಸಮಯ ನೀಡಿ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು,**
**ಆನೇಕಲ್.**